
# ಸಂಕಲನ ಗ್ರಂಥ ‘ಸಾಸಿವೆಯಲ್ಲಿ ಸಾಗರ’




ಕೃತಿ : ಸಾಸಿವೆಯಲ್ಲಿ ಸಾಗರ
ಲೇಖಕರು : ಸ್ವಾಮಿ ಶಾಂತಿವ್ರತಾನಂದ
ಪ್ರಕಾಶಕರು : **ವಿಕ್ರಮ್ ಪ್ರಕಾಶನ, ನಂ. 240, 5ನೇ ಮುಖ್ಯರಸ್ತೆ, 2ನೇ ಅಡ್ಡ ರಸ್ತೆ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ಹೆಬ್ಬಾಳ, ಬೆಂಗಳೂರು - 560 024**
ಪುಟಗಳು : **192** ಬೆಲೆ : **160 ರೂ.**

ಈಚಿನ ದಿನಗಳಲ್ಲಿ ದೀರ್ಘಬರಹಗಳಿಗಿಂತ, ಸಣ್ಣಗಾತ್ರದ ಹಾಗೂ ಅಂಕಣ ಬರಹಗಳು ಹೆಚ್ಚು ಮಂದಿ ಓದುಗರನ್ನು ಸೆಳೆಯುತ್ತವೆ. ಕೆಲವೇ ವಾಕ್ಯಗಳಲ್ಲಿ ಮನ ಮುಟ್ಟುವ ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವುದು ಸಾಧ್ಯವಿದೆ. ಇಂತಹ ಅಂಕಣ ಬರಹಗಳ ಸಂಕಲನವೇ **‘ಸಾಸಿವೆಯಲ್ಲಿ ಸಾಗರ’**. ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ, ಲೇಖಕರ ‘ವಚನಾಮೃತ’ ಅಂಕಣದ ೧೯೨ ಬರಹಗಳ ಸಂಕಲನ ಇದಾಗಿದೆ. ವಿಷಯ ವೈವಿಧ್ಯ, ನಿರೂಪಣೆಯ ಕೌಶಲ, ಸಣ್ಣ ಸಣ್ಣ ಕಥೆ, ಘಟನೆ, ದೃಷ್ಟಾಂತಗಳಿಂದ ಕೂಡಿದ ಪರಿಣಾಮಕಾರಿ ಅಭಿವ್ಯಕ್ತಿ, ಸಂದರ್ಭೋಚಿತವಾದ ಸೂಕ್ತಿಗಳ ಬಳಕೆ — ಈ ಎಲ್ಲ ಕಾರಣಗಳಿಂದ ಇಲ್ಲಿನ ಲೇಖನಗಳು ಗಮನಾರ್ಹವಾಗಿವೆ. ಮುನ್ನುಡಿಯಲ್ಲಿ ಸ್ವಾಮಿ ರಾಘವೇಶಾನಂದಜಿಯವರು ಹೀಗೆ ಬರೆಯುತ್ತಾರೆ: ‘ಉಪನಿಷತ್ತುಗಳಿಂದ, ಪುರಾಣಗಳಿಂದ, ಭಗವದ್ಗೀತೆಯಿಂದ, ಸಂತರುಗಳ ಜೀವನದಿಂದ, ಭಗವಾನ್ ಶ್ರೀರಾಮಕೃಷ್ಣರ, ಮಹಾಮಾತೆ ಶ್ರೀಶಾರದಾದೇವಿಯವರ, ಸ್ವಾಮಿ ವಿವೇಕಾನಂದರ ಜೀವನ-ಉಪದೇಶಗಳಿಂದ, ಉಪಯುಕ್ತವಾದ ಉಪದೇಶಗಳು, ಕಥೆಗಳನ್ನು ಆರಿಸಿಕೊಂಡು ಓದುವವರ ಮನಸೆಳೆಯುವ ಶೈಲಿಯಲ್ಲಿ ಬರೆದಿದ್ದಾರೆ.’

ಇಲ್ಲಿನ ವಿಷಯ ವೈವಿಧ್ಯವನ್ನು ಕುರಿತು ಒಂದು ಮಾತು. ಪ್ರಸ್ತುತ ವಿದ್ಯಮಾನಗಳು, ಸಾರ್ವತ್ರಿಕ ಸತ್ಯಗಳು, ಆಧುನಿಕ ಜೀವನದ ವೈರುಧ್ಯಗಳು, ನೈತಿಕ ಬಿಕ್ಕಟ್ಟು, ಕಷ್ಟ-ಸುಖ, ಸೋಲು-ಗೆಲುವು, ದೇಶಪ್ರೇಮ, ಧರ್ಮ-ಆಧ್ಯಾತ್ಮಿಕತೆ, ಮಹಾತ್ಮರ ಉಪದೇಶಗಳು — ಹೀಗೆ ಎಲ್ಲ ಬಗೆಯ ಬರಹಗಳೂ ಇಲ್ಲಿವೆ. ಏಕತಾನತೆಯ ಬೇಸರವಿಲ್ಲ, ಅತಿ ತಾರ್ಕಿಕತೆಯ ಭಾರವಿಲ್ಲ, ಲಘುಬರಹಗಳ ಸಾಮಾನ್ಯತೆ ಇಲ್ಲಿಲ್ಲ. ಹೆಚ್ಚು ಗಂಭೀರವೂ ಅಲ್ಲದ, ಆದರೆ ತೀರ ಸಂಕೀರ್ಣವೂ ಅಲ್ಲದ, ‘ಚೆನ್ನಾಗಿ ಓದಿಸಿಕೊಂಡು ಹೋಗುವ’ ಬರವಣಿಗೆ ಇಲ್ಲಿನದು. ಆಗಾಗ, ಸಮಯ ಸಿಕ್ಕಿದಾಗಲೆಲ್ಲ ಐದಾರು ನಿಮಿಷಗಳಲ್ಲಿ ಒಂದೊಂದು ಲೇಖನವನ್ನು ಓದಿ ಮುಗಿಸಬಹುದು. ಒಂದೇ ಸಮನೆ, ಉದ್ದಕ್ಕೂ ಓದಬೇಕಿಲ್ಲ; ಬಿಡುವಾದಾಗ ಹತ್ತಿಪ್ಪತ್ತು ನಿಮಿಷ ಓದಿ ಆನಂದಿಸಬಹುದಾದ ಕೃತಿಯಿದು. ಓದಿದ ಬಳಿಕ ಉಲ್ಲಾಸದೊಂದಿಗೆ ಹೊಸ ಅರಿವನ್ನೂ ನೀಡುವ ವಿಶಿಷ್ಟ ಬಗೆಯ ಬರಹಗಳಿವು. ಲೇಖಕರ ಚಿಂತನೆ ಹಾಗೂ ಲೇಖನ ಕಲೆ ಎರಡೂ ಇಲ್ಲಿ ಮೇಳೈಸಿವೆ.

ಇಲ್ಲಿನ ಬರಹ ಶೈಲಿಯನ್ನು ಪರಿಚಯಿಸುವ ಒಂದು ಸಣ್ಣ ಘಟನೆ: ‘‘ಬಾಬಾ ಅಮ್ಟೆಯವರ ತಾಯಿ ಲಕ್ಷ್ಮೀಬಾಯಿ ಅತ್ಯಂತ ಸುಸಂಸ್ಕೃತರು, ಬುದ್ಧಿಶಾಲಿಯಾಗಿದ್ದರು.. ಒಮ್ಮೆ ಅಮ್ಟೆಯವರಿಗೆ ಅವರು ಒಂದು ಬೊಂಬೆಯನ್ನು ಖರೀದಿಸಿ ತಂದುಕೊಟ್ಟರು... ಬೊಂಬೆಯನ್ನು ಮಗನಿಗೆ ಕೊಡುತ್ತಾ, ‘ಮಗು, ಈ ಬೊಂಬೆಯನ್ನು ಬೀಳಿಸುತ್ತಾ ಬೀಳಿಸುತ್ತಾ ನೀನು ಸುಸ್ತಾಗುವಿಯಷ್ಟೇ. ಆದರೆ ಅದು ಪ್ರತಿಬಾರಿಯೂ ಎದ್ದು ನಿಲ್ಲುತ್ತದೆ’ ಎಂದರು. ಆಮ್ಟೆಯವರಿಗೆ ತಾಯಿಯ ಮಾತಿನ ಹಿಂದಿರುವ ಗೂಢಾರ್ಥ ತಿಳಿಯಲಿಲ್ಲ. ಆಗ ತಾಯಿ, ‘ಈ ಬೊಂಬೆಯ ರೀತಿಯಲ್ಲೇ ನೀನೂ ಸಹ ಜೀವನದಲ್ಲಿ ಅನೇಕ ಸಲ ಬೀಳಬೇಕಾಗಬಹುದು. ಆದರೆ ನಿಜವಾದ ಘನತೆ ಇರುವುದು ಬಿದ್ದ ನಂತರ ತಕ್ಷಣ ಏಳುವುದರಲ್ಲಿ’ ಎಂದರು. ತಾಯಿಯ ಈ ಅಮೂಲ್ಯ ಸಲಹೆಯನ್ನು ಅಮ್ಟೆಯವರು ಗ್ರಹಿಸಿದರು.’’ (‘ಬೊಂಬೆ ಕಲಿಸಿದ ಪಾಠ’, ಪು.೩೬)

ಸುಲಭ ಬೆಲೆಗೆ ಲಭ್ಯವಾಗಿರುವ ಈ ಗ್ರಂಥವು ಉತ್ತಮ ಮುಖಪುಟದಿಂದಲೂ, ಸುಂದರ ಮುದ್ರಣದಿಂದಲೂ ಕೂಡಿದೆ. ಓದುಗರಲ್ಲಿ ಅನೇಕ ವಿಷಯಗಳ ಬಗ್ಗೆ ಅರಿವು ಮೂಡಿಸಲು, ಅಂತೆಯೇ ಅವರ ಮನಸ್ಸನ್ನು ಮುದಗೊಳಿಸಲು ಈ ಕೃತಿ ಅತ್ಯಂತ ಸಮರ್ಥವಾಗಿದೆ. ಓದುವ ಪ್ರವೃತ್ತಿಯೇ ಬತ್ತಿಹೋಗುತ್ತಿರುವ ಈ ಕಾಲದಲ್ಲಿ ಇಂತಹ ಉತ್ತಮ ಕೃತಿಗಳು ಓದುಗರ ಓದುವ ಹವ್ಯಾಸವನ್ನು ಉಳಿಸಬೇಕಾಗಿದೆ.